3

# “ನಾನು ಪರಿಶುದ್ಧನಾಗಿರುವಂತೆ ನೀವು ಪರಿಶುದ್ಧರಾಗಿರಬೇಕು” (1 ಪೇತ್ರ 1:13-25)

ವಿವಿಧವಾದ ಊಹೆಗಳು ಬೈಬಲಿನ ವಿದ್ಯಾರ್ಥಿಗೆ ಬೆಲೆಯುಳ್ಳ ಮೂಲವಾಗಿರುತ್ತದೆ. ಇದರಿಂದ ಅವನು ಪ್ರಪಂಚವನ್ನು ತಿಳಿದುಕೊಳ್ಳಬಹುದು ಇಲ್ಲದೆ ಹೋದರೆ ಅ ಪ್ರಪಂಚವನ್ನು ಅವನು ಕಳೆದುಕೊಳ್ಳುತ್ತಾನೆ. ಆಸ್ಯ ಸೀಮೆಯಲ್ಲಿ, ಬಹುಶಃ ಆಸ್ಯ ಸೀಮೆಯ ಒಂದು ದೊಡ್ಡ ಪಟ್ಟಣವಾದ ಸ್ಮುರ್ನ ಎಫೆಸ, ಅಥವಾ ಪೆರ್ಗ್ಗಮದಲ್ಲಿ ಮೊದಲನೆ ಶತಮಾನದಲ್ಲಿ ನೀವು ಪೇತ್ರನ ಪತ್ರವನ್ನು ಮೊದಲನೆಯ ಸಾರಿ ಓದುವವವರಾಗಿದ್ದೀರಿ ಎಂದು ಊಹಿಸುವುದಾದರೆ, ಆಸ್ಯ ಸೀಮೆಯವರಿಗೆ, ಮೊದಲನೇ ಶತಮಾನಕ್ಕೆ ತಕ್ಕಂತೆ ಬರೆದ 1 ಪೇತ್ರನ ವಾಕ್ಯಗಳ ಬಲವನ್ನು ಅರ್ಥಮಾಡಿಕೊಳ್ಳುತ್ತೇವೆ.

ನೀವು ಪ್ರವೇಶಿಸಿರುವ ಪ್ರಪಂಚದಲ್ಲಿ ಸಭೆಯು ಹೊಸದಾಗಿ ಸೇರ್ಪಡೆಗೊಂಡಿತ್ತು. ಯೇಸುವಿನ ಕ್ರೂಜಿತವಾದಂಥ ವಿಷಯವು ಇನ್ನೂ ಹಸಿಯಾಗಿ ಜನರ ನೆನಪಿನಲ್ಲಿತ್ತು. ಪ್ರಥಮವಾಗಿ ನಿಮ್ಮ ಪಟ್ಟಣವನ್ನು ಸಂಧಿಸಿದ ಪ್ರಸಂಗಿಯನ್ನು ನೀವು ನೆನಪು ಮಾಡಿ ಕೊಳ್ಳುವಿರಿ. ಅವನು ಪ್ರಥಮವಾಗಿ ಆಸಕ್ತಿಕರವಾಗಿ ಕಾಣಿಸಲಿಲ್ಲ, ಆದರೆ ಅವನ ಸಾಕ್ಷಿಯ ಸಂದೇಶವು ನಿಮಗೆ ಆಸಕ್ತಿ ಉಂಟುಮಾಡಿತ್ತು, ಒಬ್ಬನೇ ದೇವರು ಅವನಿಗೆ ವಿರುದ್ಧವಾಗಿ ಎಲ್ಲರೂ ಪಾಪಮಾಡಿದರು. ಎಂದು ಅವನು ಹೇಳಿದನು, ಮತ್ತು ಆ ಪಾಪದ ದೆಸೆಯಿಂದ ಅವರು ಆತನಿಗೆ ವೈರಿಗಳಾದರು. ಅದಕ್ಕಾಗಿ ದೇವರು ಒಡೆಯನಾದಂಥ ಕ್ರಿಸ್ತನನ್ನು ಅವರಿಗೆ ರಕ್ಷಕನನ್ನಾಗಿ ಕಳುಹಿಸಿದನು, ಈ ನಿರೀಕ್ಷೆಯ ಮತ್ತು ಪ್ರೀತಿಯ ಸಂದೇಶವನ್ನು ಕೇಳಿ, ನೀನು ಕ್ರೈಸ್ತನಾಗಿರಬಹುದು.

ಹತ್ತು ಅಥವಾ ಹದಿನೈದು ವರುಷಗಳು ತೀರಿದ ನಂತರ, ನೀವು ಮತ್ತು ಇತರರು ಧಾರ್ಮಿಕ ಪದ್ಧತಿಗಳನ್ನು ನಿಮ್ಮ ಸಮೂದಾಯದಲ್ಲಿ ನಡೆಸದೆ ಇರುವಿರಿ, ನಿಮ್ಮ ಸ್ನೇಹಿತ ರಲ್ಲಿ ಕೆಲವರು ನಿಮ್ಮ ವಿಷಯದಲ್ಲಿ ಕಹಿಭಾವನೆವುಳ್ಳವರಾಗಿದ್ದಾರೆ. ಸಂಬಂಧಿಕರು ಮತ್ತು ನಿಮ್ಮ ನೆರೆಹೊರೆಯವರು ನಿಮ್ಮನ್ನು ಮೂರ್ಖರು ಎಂದು ಕರೆದಿದ್ದಾರೆ; ನೀವು ಸೇವೆ ಮಾಡುತ್ತಿರುವ ದೇವರ ಕುರಿತಾಗಿ, ಪಟ್ಟಣದ ಅಧಿಕಾರಿಗಳು ನಿಮಗೆ ಪ್ರಶ್ನೆ ಕೇಳುತ್ತಿದ್ದಾರೆ. ನಿಮ್ಮ ಕೆಲವು ಕ್ರೈಸ್ತ ಸ್ನೇಹಿತರು ಕ್ರಿಸ್ತನನು ಅಲ್ಲಗಳೆದು ವಿಶ್ವಾಸಿಗಳಿಗೆ ಕಳಂಕವೆಸಗುತ್ತಿದ್ದಾರೆ.

ಇಂಥಾ ಪ್ರಪಂಚದಲ್ಲಿ ಕ್ರೈಸ್ತರು ಪ್ರೋತ್ಸಾಹಕ್ಕಾಗಿ ಹಾತೂರೆಯುತ್ತಿದ್ದಾರೆ; ಈ ಸಂದರ್ಭದಲ್ಲಿ 1 ಪೇತ್ರನ ಪತ್ರಿಕೆಯು, ಆತ್ಮೀಕ ಜೀವನ ಮತ್ತು ಮರಣದ ನಡುವೆ ಇರುವ ವ್ಯತ್ಯಾಸವನ್ನು ತಿಳಿಸುತ್ತಿತ್ತು. ಪೇತ್ರನ ಸಂದೇಶವು ಸರಳವಾಗಿತ್ತು. “ಆದದರಿಂದ ನೀವು ಮನಸ್ಸಿನ ನಡುವನ್ನು ಕಟ್ಟಿಕೊಂಡು ಸ್ವಸ್ಥಚಿತ್ತರಾಗಿರಿ ...” (1:13) ಎಂದು ಪತ್ರಿಕೆಯು ಹೇಳುತ್ತದೆ. ದೇವರು ತನ್ನ ಜನರಿಂದ ಕಡಿಮೆಯಾದ ಪರಿಶುದ್ಧತೆಯನ್ನು ಬಯಸುವದಿಲ್ಲ. ಪೇತ್ರನು ಯಾಜಕಕಾಂಡ 1:16ನ್ನು ಪುನರುಚ್ಚರಿಸಿದ್ದಾನೆ, “ನಾನು ಪರಿಶುದ್ಧನಾಗಿರುವದರಿಂದ ನೀವೂ ಪರಿಶುದ್ಧರಾಗಿರ ಬೇಕು” (ಯಾಜಕಕಾಂಡ 11:44; 19:2; 20:7).

ಪರಿಶುದ್ಧತೆಯ! ಪದಕ್ಕೆ ಸ್ಪಂದಿಸುವುದು, ಕ್ರೈಸ್ತರಿಗೆ ಕಷ್ಟಕರವಾಗಿತ್ತು. ಅವರು ಹೇಗೆ

ಪರಿಶುದ್ಧರಾಗಿರಬೇಕಿತು? ವಿದೇಯತೆ, ರಕ್ಷಣೆ ಮತ್ತು ಹೊಸದಾಗಿ ಹುಟ್ಟುವದರ ಮೂಲಕ ಉಂಟಾಗುವ ಅನುಭವದ ಮುಖಾಂತರ ಪೇತ್ರನು ಉತ್ತರವನ್ನು ನೀಡುತ್ತಿದ್ದಾನೆ.

## ಪರಿಶುದ್ಧವಾದ ಮಕ್ಕಳಂತೆ ವಿಧೇಯರಾಗಿರ್ರಿ (1:13-17)

ಹಿಂಸೆ ಮತ್ತು ಕ್ರೈಸ್ತತ್ವ ಪ್ರಾಯೋಗಿಕವಾಗಿರದೇ ಅನೇಕರಾದ ನಮಗೆ ಕೇವಲ ವಿಚಾರ ಸರಣಿಗೆ ಸಂಬಂಧಪಟ್ಟದ್ದಾಗಿರುತ್ತದೆ. ಆದರೆ 1 ಪೇತ್ರ ಪತ್ರಿಕೆಯ ಮೊದಲ ಓದುಗರಿಗೆ ಇದು ವ್ಯತ್ಯಾಸವುಳ್ಳದ್ದಾಗಿತ್ತು. ಒಬ್ಬ ಸಹೋದರನನ್ನು ಪಟ್ಟಣದ ಕೇಂದ್ರ ಸ್ಥಾನಕ್ಕೆ ಒಯ್ಯಲ್ಪಟ್ಟಾಗ, ಅವನ ಬೆನ್ನಿನಿಂದ ಬಟ್ಟೆಯನ್ನು ಎಳೆದು ಹಾಕಿದಾಗ, ಅವನನ್ನು ಬಗ್ಗಿಸಿ ಹೊಡೆಯುವಾಗ, ಹಿಂಸೆಯು ನಿಜವಾಗಿತ್ತು. ಒಬ್ಬ ಸಹೋದರಿಯು ಅವನ ಕುಟುಂಬದಿಂದ ತಿರಸ್ಕರಿಸಲ್ಪಟ್ಟಾಗ, ಆಕೆಯ ಕುಟುಂಬದ ಸದಸ್ಯರು ಆಕೆಯೊಂದಿಗೆ ಮಾತನಾಡದೆ ಇರುವಾಗ, ಮಕ್ಕಳಿಗೆ ಸ್ನೇಹಿತರು ಇಲ್ಲದೆ ಇರುವಾಗ, ಹಿಂಸೆಯೇ ಜೀವವಾಗಿತ್ತು. ಪೇತ್ರನ ಮೊದಲ ಓದುಗರು ಸಮಯವನ್ನು ನೋಡುತ್ತಾ ಕ್ರೈಸ್ತರು ಅನುಭವಿಸುತ್ತಿದ್ದ ಹಿಂಸೆಗಳಿಗೆ ತಲೆಯನ್ನು ಅಲ್ಲಾಡಿಸದೆ, ಅವರ ಬೆನಿನ್ನ ಮೇಲೆ ಉಂಟಾಗಿದ್ದ ಗಾಯದ ಗುರುತುಗಳನ್ನೇ ತೋರಿಸುತ್ತಿದ್ದರು.

ಅವರ ಬೆನ್ನಿನ ಗಾಯಗಳಿಗೂ, ಅವರ ಯಾತನೆಗಳಿಗೂ, ಪೇತ್ರನು ಯಾವ ರೀತಿಯಲ್ಲಿ ಪ್ರತಿಕ್ರಿಯಿಸಿದನು? ಕ್ರೈಸ್ತರು ದೇವರಿಗೆ ವಿಧೇಯರಾಗಿರಬೇಕು ಎಂದು ಹೇಳಿದನು (1:14). ತಮ್ಮ ಜೀವಿತದಿಂದ ಪಾಪವನ್ನು ತ್ಯಜಿಸಿ ಪರಿಶುದ್ಧರಾಗಿರಬೇಕೆಂದು ಬೇಡಿಕೊಂಡನು. ಬಂಗಾರವನ್ನು ಬೆಂಕಿಯ ಪರಿಶೋಧಿಸುವಂತೆ, ಸಂಕಟವು ಅವರನ್ನು ಪರಿಶೋಧಿಸುತ್ತಿತ್ತು ಎಂದು ತಿಳಿಸಿದನು (1:7). ಬಲಹೀನವಾದ ಹೃದಯದಿಂದ ಹೋರಾಟವನ್ನು ಮಾಡುವದು ಅನಗತ್ಯ. ಪೇತ್ರನು ಹೇಳಿದ್ದೇನೆಂದರೆ, "ವೈರಿಯು ಹೋರಾಟ ಮಾಡಲಿಚ್ಚಿಸಿದರೆ, ಅವನಿಗೆ ಒಬ್ಬರನ್ನು ನೀಡೋಣ, ನಾವು ಕೆಟ್ಟದ್ದನ್ನು ಪರಿಶುದ್ಧತೆಯಿಂದ ಎದುರಿಸೋಣ."

ಅದು ಆಕಸ್ಮಿಕವಾಗಿರದೆ, ಪೇತ್ರನು ವಿಧೇಯತೆಯನ್ನು ಮತ್ತು ಪರಿಶುದ್ಧತೆಯನ್ನು ಬಾವುಕವಾಗಿ ಅಕ್ಕಪಕ್ಕದಲ್ಲಿಡದೆ (1:14, 15). ಪರಿಶುದ್ಧತೆಯು ಕೇವಲ ಮಾನಸಿಕವಾಗಿರದೇ ಅದು ಅವರ ಶೈಲಿಯಾಗಿತ್ತು ಪರಿಶುದ್ಧತೆಗೆ ಎರಡು ಸಂಗತಿಗಳು ಅವಶ್ಯವಾಗಿವೆ. ಮೊದಲನೆಯದಾಗಿ ಅದಕ್ಕೆ ದೀನತೆ ಅವಶ್ಯವಿರುತ್ತದೆ. ನಮ್ಮನ್ನು ನಾವು ಮಾರ್ಗದರ್ಶನ ಮಾಡಿಕೊಳ್ಳುವದಕ್ಕೆ ನಮಗೆ ಜ್ಞಾನವೂ ಇರುವದಿಲ್ಲ. ಮೂಲವೂ ಇರುವದಿಲ್ಲವೆಂದು ತಿಳಿದುಕೊಳ್ಳಬೇಕು. ಎರಡನೆಯದಾಗಿ ಅದಕ್ಕೆ ಭರವಸೆಯು ಅವಶ್ಯವಿರುತ್ತದೆ. ಭಯವಿಲ್ಲದೆ ನಮ್ಮನ್ನು ನಾವು ಇತರರ ಮಾರ್ಗದರ್ಶನಕ್ಕೆ ಒಪ್ಪಿಸಿಕೊಡಬೇಕು. ಇಲ್ಲಿ ಪೇತ್ರನು ಮಕ್ಕಳ ಚಿತ್ರಣವನ್ನು ನೀಡಿರುವುದು ಆಶ್ಚರ್ಯವುಂಟು ಮಾಡುವದಿಲ್ಲ, "ನೀವು ವಿಧೇಯ ಮಕ್ಕಳಾಗಿರ್ರಿ ..." (1:14).

ನಮ್ಮ ಪರಿಶುದ್ಧತೆಯ ಜವಾಬ್ದಾರಿಯನ್ನು ಹೊಂದಿರುವ ಇತರರಿಗೆ, ಯಾವುದೇ ಪ್ರಶ್ನೆಗಳಿಲ್ಲದೆ ನಮ್ಮನ್ನು ನಾವು ಅವರಿಗೆ ಒಪ್ಪಿಸಿಕೊಡುವುದು, ಶಿಷ್ಯತ್ವ ಎಂದು ಹಲವು ಕ್ರೈಸ್ತರು ಯೋಚಿಸುವುದು ಅಸಂಬದ್ಧವಾಗಿರುತ್ತದೆ. ಪೇತ್ರನು ಅಪ್ಪಣೆ ಮಾಡಿದಂತೆ, ಮಗುವಿನಂತೆ ವಿಧೇಯರಾಗುವುದು, ದೀನತೆ ಮತ್ತು ಭರವಸೆಯನ್ನು ಒಳಗೊಂಡಿರುತ್ತದೆ. ಮತ್ತು ದೇವರೊಂದಿಗಿನ ಸಂಬಂಧವನ್ನು ಹೊಂದಿರುತ್ತದೆ. ನಮಗೆ ಮಾರ್ಗದರ್ಶನ ಮಾಡಲು ದೇವರ ಹೊರತಾಗಿ ಇನ್ನೊಬ್ಬರು ನಮ್ಮ ಜೀವಿತವನ್ನು ವಹಿಸಿಕೊಳ್ಳಲು ಎಡೆ ಮಾಡಿಕೊಡುವಂಥದ್ದು, ವಿಗ್ರಹ ಆರಾಧನೆಯಾಗಿರುತ್ತದೆ. ಅಂದರೆ ಪರಿಶುದ್ಧತೆಯ ಜೀವಿತವನ್ನು ಬಿಟ್ಟುಕೊಡುವಂಥದ್ದು ಎಂಬುದಾಗಿ ಭರವಸೆ, ದೀನತೆ ಹಾಗೂ ವಿಧೇಯತೆಯನ್ನು ತ್ಯಜಿಸುವಂಥದ್ದಾಗಿದೆ. ಕ್ರಿಸ್ತನ ಶಿಷ್ಯನು, ದೇವರ ಚಿತ್ತವನ್ನು ಹುಡುಕಿಕೊಂಡು, ಅದರಲ್ಲೇ ಜೀವಿಸುತ್ತಾನೆ.

ವರ್ತಮಾನ ಕಾಲದ, ಈ ಕ್ರೈಸ್ತರಲ್ಲಿ ಇದ್ದ ಸದ್ಗುಣವು, ಅವರ ಹಿಂದಿನ ಜೀವಿತದಲ್ಲಿ ಇದ್ದಂಥ ಕಾರ್ಯಗಳಿಗೆ ತದ್ವಿರುದ್ಧವಾಗಿತ್ತು. ಅವರ ವರ್ತಮಾನದ ಶ್ರೇಷ್ಟತೆಯ ಅವರ

ಸ್ಪ, ಸಾಕ್ಷಿಯಾಗಿತ್ತು. ಆದುದರಿಂದ, ಆ ಪ್ರಪಂಚವು ಯಾಕೆ ಅವರಿಗೆ ಯಾತನೆಯನ್ನು ಹಿಂಸೆಯನ್ನು ನೀಡಿತು ಎಂದು ಅವರು ತಿಳಿದುಕೊಳ್ಳಲು ಸಾಧ್ಯವಾಗಲಿಲ್ಲ. ಯಾಕೆ ದೇವರು ಅದನ್ನು ಅನುಮೋದಿಸಿದನು? ಯಾಕೆ ಅವರು ಸಂಕಟಪಡಬೇಕಾಯಿತು? ಅದು ಪುರಾತನ ಪ್ರಶ್ನೆಯಾಗಿತ್ತು, ಯೋಬನ ಜೀವಿತದಲ್ಲಿ ನೊಂದುಕೊಂಡಾಗ ಅವನು ಕೇಳಿದ್ದೇನೆಂದರೆ, "ಸರ್ವಶಕ್ತನು ಏಕೆ (ದಂಡನೆಯ) ಕಾಲಗಳನ್ನು ನೇಮಿಸಿ ಇಟ್ಟುಕೊಂಡಿಲ್ಲ? ಆತನನ್ನು ಅರಿತವರಿಗೆ ಆತನ (ನ್ಯಾಯ ತೀರ್ಪಿನ) ದಿನಗಳು ಏಕೆ ಗೋಚರವಾಗುವದಿಲ್ಲ?" (ಯೋಬ 24:1; NIV). ದುಷ್ಟರ ಸಮೃದ್ಧಿಯನ್ನು ಕಂಡಾಗ ದಾವೀದನು ಅರಿಕೆಮಾಡಿದ್ದೇನೆಂದರೆ, "ನನ್ನ ಕಾಲುಗಳು ಜಾರಿದವುಗಳೇ ನನ್ನ ಹೆಜ್ಜೆಗಳು ತಪ್ಪಿದವುಗಳೇ" ಅಂದನು (ಕೀರ್ತನೆ 73:2, 3; NIV).

ಯೋಬನ ಸ್ನೇಹಿತರ ಮುಖಾಂತರ, ಪೇತ್ರನು ಹಿಂಸೆಯ ಕುರಿತಾಗಿ ಅರ್ಥ ಮಾಡಿಕೊಳ್ಳುವವನಾಗಿದ್ದಾನೆ ಎಲೀಫಜನು (ಯೋಬ 5:17) ಮತ್ತು ಎಲೀಹು (ಯೋಬ 33:19) ಯೆಹೋವನು ಸಂಕಟವನ್ನು ನೀಡುವದು ಅವರ ಒಳತಿಗಾಗಿ ಎಂದು ಅವರು ಚರ್ಚೆ ಮಾಡಿದ್ದರು. ಪೇತ್ರನ ಸಲಹೆ ಏನೆಂದರೆ ಹಿಂಸೆಯು ಅವರ ನಂಬಿಕೆಯನ್ನು ಬೆಳ ಗುವಂತೆ ಮಾಡುತ್ತದೆ. ಅದು ಬಂಗಾರವನ್ನು ಶೋಧಿಸಿದಂತೆ ಕ್ರೈಸ್ತರನ್ನು ಶೋಧಿಸುತ್ತದೆ ಎಂಬ ಉತ್ತರವನ್ನು ನೀಡುತ್ತಿದ್ದಾನೆ. ಎಲ್ಲಾ ಸಂಕಟಗಳು ದೇವರ ನೀತಿ ಶಿಕ್ಷೆಯಾಗದೆ, ಅದು ಕ್ರೈಸ್ತರಿಗೆ ಲಾಭದಾಯಕವಾಗಿರುತ್ತದೆ. ದೇವರು ತಾರತಮ್ಯ ಮಾಡದೆ ಎಲ್ಲರನ್ನು ತೀರ್ಪುಮಾಡುವನು ಎಂಬದೆ ಹಿಂಸೆಯ ಕುರಿತಾದ ಪೇತ್ರನ ಉತ್ತರವಾಗಿರುತ್ತದೆ (1:17). ಈ ಸಂಬಂಧದಲ್ಲಿ ಅವನ ಉತ್ತರವು ಕೀರ್ತನೆ 73ಕ್ಕೆ ಸಮಾನವಾಗಿರುತ್ತದೆ. ದುಷ್ಟರ ಸಮೃದ್ಧಿಯು ತಾತ್ಕಾಲಿಕವಾಗಿರುತ್ತದೆ ಎಂದು ಪೇತ್ರನು ಅಂತಿಮವಾಗಿ ನಿರ್ಣಯಿಸಿದನು. ಅದರ ಪಲಿತಾಂಶ, ಪೇತ್ರನು ಅದನ್ನೇ ಮಾಡಿದನು.

ದೈವಭಕ್ತರು ತಮ್ಮ ಪ್ರತಿಫಲವನ್ನು ಹೊಂದುವರು, ದುಷ್ಟರು ಯಾವ ನೀತಿ ಕಾರ್ಯವನ್ನು ಅನೀತಿ ಎಂಬುದಾಗಿ ಮಾಡಿದರೂ, ಅದರ ಪ್ರತಿಫಲವನ್ನು ಅವರೇ ಹೊಂದುವರು. ಪರಿಶುದ್ಧರಾಗಿರಬೇಕಾದಾಗ, ಹಿಂಸೆಯ ಕುರಿತಾಗಿ ವಿಶ್ಲೇಷಣೆ ಮಾಡುವದು, ವರ್ತಮಾನಕಾಲದಲ್ಲಿ ಅನಾವಶ್ಯವಾಗಿದೆ. "ಈ ಲೋಕದಲ್ಲಿ ನೀವು ಪ್ರವಾಸಿಗಳಾಗಿದ್ದೀರಿ" ಪೇತ್ರನು ತನ್ನ ಓದುಗರಿಗೆ ಹೇಳುವದೇನೆಂದರೆ, ದೀನತೆ, ಭರವಸೆ, ಮತ್ತು ವಿಧೇಯತೆ ಎಂಬ ಪದಗಳು ಈ ಲೋಕದಲ್ಲಿ ನೀವು "ಭಯಭಕ್ತಿಯಿಂದ" ಇರ್ರಿ. ಎಂಬ ವಾಕ್ಯದಲ್ಲೇ ಅಡಕವಾಗಿದೆ ಎಂಬುದಾಗಿದೆ. ಇದರ ಪರಿಣಾಮವಾಗಿ, ಪೇತ್ರನು ಹೇಳುವುದೇನೆಂದರೆ, "ಜೀವನದ ಸಕಲ ವಿಧವಾದ ಜಟಿಲ ಸಮಸ್ಯೆಗಳಿಗೆ ಉತ್ತರವು ದೊರಕಲಾಗದು, ಆದರೆ ನಿಮಗೆ ಒಂದು ಉತ್ತರವಿದೆ: ಸೃಷ್ಟಿಯ ಕರ್ತನು ನಿಮ್ಮನ್ನು ಅರಿತಿದ್ದಾನೆ, ಆತನು ನಿಮ್ಮನ್ನು ಪ್ರೀತಿಸುತ್ತಾನೆ, ಮತ್ತು ಆತನು ನಿಮ್ಮನ್ನು ಬಿಡುಗಡೆ ಮಾಡಿದ್ದಾನೆ."

## ಕ್ರಿಸ್ತನ ರಕ್ತದಿಂದ ಬಿಡುಗಡೆ ಹೊಂದಿದ್ದೇವೆ (1:18-21)

1:14 ಮತ್ತು 1:18ರಲ್ಲಿ "ಅವರ ಹಿಂದಿನ ನಡವಳಿಕೆಯ ಬಗ್ಗೆ" ಪೇತ್ರನು ತನ್ನ ಓದುಗರಿಗೆ ನೆನಪು ಮಾಡುತ್ತಿದ್ದಾನೆ. ವಚನ 14ರಲ್ಲಿ ಅವರು ಮುಂಚೆ ಅಜ್ಞಾನಿಗಳಾಗಿದ್ದಾಗ ಅವರಿಗಿದ್ದ ದುರಾಶೆಯ ಬಗ್ಗೆ ಬರೆದಿದ್ದಾನೆ ಮತ್ತು ವಚನ 18ರಲ್ಲಿ ನಿಮ್ಮ ಹಿರಿಯರು ಕಲಿಸಿಕೊಟ್ಟ ವ್ಯರ್ಥವಾದ ನಡವಳಿಕೆಯಿಂದ, ದೇವರಿಲ್ಲದೆ, ಅವರ ಜೀವಿತವು ಒಳ್ಳೆಯ ನಡವಳಿಕೆಯಿಲ್ಲದೆ ಮತ್ತು ಗುರಿಯಿಲ್ಲದವರಾಗಿ, ತಾತ್ಕಾಲಿಕವಾದ ಆಶೆಗಳನ್ನು ಪೂರೈಸಿಕೊಳ್ಳುವ ಸ್ಥಿತಿಯಲ್ಲಿತ್ತು.

ಈಗಿನ ಕಾಲದ ಜ್ಞಾನಿ ಎನಿಸಿಕೊಳ್ಳುವ ಲೋಕವು ನವೀನ, ಮತ್ತು ಧೈರ್ಯವುಳ್ಳಂಥವರು ಎಂಬುದಾಗಿ ಎನಿಸಿಕೊಳ್ಳುವವರು ಸಹ ಇದೆ ರೀತಿಯಲ್ಲಿ ತಿಳುವಳಿಕೆ ಇಲ್ಲದವರಾಗಿ, ತಮ್ಮ ಜೀವಿತವನ್ನು ನಾಶಪಡಿಸಿಕೊಂಡು, ಸಾವಿರಾರು ವರುಷಗಳಿಂದ ಸಂತೋಷವನ್ನು

ಕಳಕೊಂಡವರಾಗಿರುತ್ತಾರೆ. ಮನಸ್ಸಿಗೆ ಹಿಡಿಸದ ದುರಾಶೆಗಳನ್ನು ಹಿಂಬಾಲಿಸುವುದು, ಗುಲಾಮನನ್ನಾಗಿ ಮಾಡಿ ನಾಶಪಡಿಸುತ್ತದೆ. ಭ್ರಷ್ಟತೆಗೆ ಗುಲಾಮರಾದವರ ಕುರಿತು ಅವರು ವಾಗ್ದಾನ ಮಾಡುವ ಸ್ವತಂತ್ರದ ಕುರಿತು, ಪೇತ್ರನು ಮುಂದೆ ತಿಳಿಸುವವನಾಗಿದ್ದಾನೆ: "... ಒಬ್ಬನು ಯಾವುದಕ್ಕೆ ಸೋತು ಹೋಗಿರುವನೋ ಅದರ ದಾಸತ್ವದೊಳಗಿರುವನಷ್ಟೆ" (2 ಪೇತ್ರ 2:19; NIV).

ಅವರ ಹಿಂದಿನ ಜೀವಿತದ ಗುಲಾಮತನದ, ಅವಿಧೇಯತೆಯ ಜೀವಿತಕ್ಕೂ ಮತ್ತು ಕ್ರೈಸ್ತರಾದಾಗ ಕ್ರಿಸ್ತನಲ್ಲಿ ಅವರು ಸಂತೋಷಪಡುತ್ತಿದ್ದ ಜೀವಿತದ ನಡುವೆ, ಪೇತ್ರನು ವ್ಯತ್ಯಾಸವನ್ನು ತೋರಿಸುತ್ತಿದ್ದಾನೆ. ಅವರು ಬಿಡುಗಡೆ ಹೊಂದಿದವರು ಎಂದು ಪೇತ್ರನು ನೆನಪು ಮಾಡುತ್ತಿದ್ದಾನೆ. "ಬಿಡುಗಡೆ" ಎಂಬ ಪದದ ತರ್ಜುಮೆ ಬಂದ ಮುಕ್ತತೆಗೆ ನೀಡುವ ಹಣ ಎಂಬುದಾಗಿ ಲೌಕೀಕವಾದ ಗ್ರೀಕ್, ಬರವಣಿಗೆಗಾರರು ಉಪಯೋಗಿಸುತ್ತಿದ್ದರು. ಒಬ್ಬ ಐಶ್ವರ್ಯವಂತನೂ, ಶಕ್ತಿವುಳ್ಳವನೂ, ಆದ ವ್ಯಕ್ತಿಯು, ಬಹಳಷ್ಟು ಹಣವನ್ನು ಕ್ರಯನೀಡಿ ಸಮುದ್ರ ಕಳ್ಳರನ್ನೂ ಅಥವಾ ಸೈನ್ಯದ ದೇಶವನ್ನು ಕೊಂಡು ಕೊಳ್ಳುತ್ತಿದ್ದನು. ಕ್ರಿ.ಪೂ. 74ರಲ್ಲಿ ಜೂಲಿಯಸ್ ಸೀಜರ್‌ನ ಜೀವಿತದಲ್ಲಿ ನಡೆದ ಘಟನೆಯನ್ನು ರೋಮಾಪುರದ ಇತಿಹಾಸಕಾರನಾದ ಸ್ಯೂಟೋನಿಯಸ್‌ನು ತಿಳಿಸಿದ್ದಾನೆ. ಯೌವನಸ್ಥನಾದ ಸೀಜರನು ಸಾಹಿತ್ಯ ಶಾಸ್ತ್ರವನ್ನು ಅಭ್ಯಾಸಿಸಲು, ಏಗೆಯನ್ ಸಮುದ್ರದಲ್ಲಿದ್ದ ರೋಡ್ಸ್ ಎಂಬ ದ್ವೀಪಕ್ಕೆ ತೆರಳಿದ್ದನು. ಆಗ ಸಮುದ್ರ ಕಳ್ಳರು ಅವನ ಹಡಗನ್ನು ವಶಪಡಿಸಿಕೊಂಡಾಗ, ಸೀಜರನು ತನ್ನ ಬಿಡುಗಡೆಗಾಗಿ ಮಿಲೇತೆಯಿಂದ ಐವತ್ತು ಚಿನ್ನದ ನಾಣ್ಯಗಳನ್ನು ತರಿಸಿದನು, ಮಿಲೇತೆಯವರು ಸಮುದ್ರ ಕಳ್ಳರಿಗೆ ಯಥೇಚ್ಛವಾದ ಹಣವನ್ನು ನೀಡಿ, ಸೀಜರನನ್ನು ಸಮುದ್ರ ಕಳ್ಳರಿಂದ ಬಂಧಮುಕ್ತ ಮಾಡಿದರು.

ಶ್ರೀಮಂತರನ್ನೂ ಶಕ್ತಿಯುತರನ್ನೂ ಬಂಧಮುಕ್ತರನ್ನಾಗಿ ಮಾಡುವದಕ್ಕೆ ಬೆಳ್ಳಿ ಮತ್ತು ಚಿನ್ನವನ್ನು ನೀಡಬೇಕಾಗಿತ್ತು, ಪೇತ್ರನು ತನ್ನ ಓದುಗರಿಗೆ ಅವರ ಗುಲಾಮತನದ ದುರಾಶೆಯಿಂದ ಬಂಧಮುಕ್ತರನ್ನಾಗಿ ಮಾಡಲು, ಇನ್ನೂ ಅಮೂಲ್ಯವಾದ ದೇವಕುಮಾರನ ರಕ್ತವನ್ನು ನೀಡಲಾಗಿದೆ ಎಂದು ತಿಳಿಸಿದನು (1:18, 19). ಪೌಲನ ವ್ಯಾಖ್ಯಾನ ಈ ರೀತಿ ಇದೆ: "ನಾವು ಆತನಲ್ಲಿ ದೇವರಿಗೆ ಸಮರ್ಪಕರಾದ ನೀತಿ ಸ್ವರೂಪಿಗಳಾಗುವಂತೆ ದೇವರು ಪಾಪಜ್ಞಾನವಿಲ್ಲದ ಆತನನ್ನು ನಮಗೋಸ್ಕರ ಪಾಪ ಸ್ವರೂಪಿಯಾಗ ಮಾಡಿದನು" (2 ಕೊರಿಂಥ 5:21).

ಪೇತ್ರನು ಕ್ರಿಸ್ತನನ್ನು ನಿಷ್ಕಳಂಕವಾದ ಯಜ್ಞದ ಕುರಿ ಎಂಬುದಾಗಿ ಹೇಳಿದನು (1:19). ಪ್ರಕಟನೆ 5:8ರಲ್ಲಿ ಕ್ರಿಸ್ತನ ಪದಕ್ಕೆ "ಕುರಿಮರಿ" ಎಂಬುದಾಗಿ ಉಪಯೋಗಿಸಲಾಗಿದೆ. ಆದರೆ ಗ್ರೀಕ್ ಭಾಷೆಯಲ್ಲಿ ಚಿಕ್ಕ ವ್ಯತ್ಯಾಸವನ್ನು ಮಾಡಿ "ಚಿಕ್ಕ ಕುರಿಮರಿ" ಎಂಬುದಾಗಿದೆ. ಕ್ರಿಸ್ತನ ಕುರಿತಾಗಿ ಹೇಳುವಾಗ, ಹೊಸ ಒಡಂಬಡಿಕೆಯ ಬರಹಗಾರರು ಬಹಳ ಅರ್ಥಗರ್ಭಿತವಾದ ಪದಗಳನ್ನು ಉಪಯೋಗಿಸಿದ್ದಾರೆ ಅಪೊಸ್ತಲರಕೃತ್ಯದಲ್ಲಿ ಹಲವು ಸಾರಿ ಆತನನ್ನು "ಸೇವಕನೆಂದು" (ಅಪೊಸ್ತಲರಕೃತ್ಯಗಳು 3:13, 26; 4:27, 30) ಆತನನ್ನು "ಸೇವಕನೆಂದು" (KJVಯಲ್ಲಿ "ಮಗ"ನೆಂದು ಅಪೊಸ್ತಲರಕೃತ್ಯಗಳು 3:13, 26ರಲ್ಲಿ ತರ್ಜುಮೆಗೊಂಡು "ಮಗು" ಎಂಬುದಾಗಿದೆ 4:27, 30). ಪ್ರಥಮ ಶತಮಾನದ ಅಂತ್ಯದ ಹಾಗೂ ದ್ವಿತೀಯ ಶತಮಾನದ ಆದಿ ಕ್ರೈಸ್ತರು, ಕರ್ತನ ಬಗ್ಗೆ "ಮಗು" ಎಂಬುದಾಗಿಯೂ "ಕುರಿಮರಿ" ಎಂಬುದಾಗಿಯೂ ಬರೆದರು ಮತ್ತು ಕರೆದರು. "ಮಗು" ಎಂಬುದಾಗಿ ಹೇಳುವಾಗ ಕ್ರಿಸ್ತನು ಮುಗ್ಧನು ಮತ್ತು ಅಮೂಲ್ಯನು ಎಂಬುದಾಗಿ ಪರಿಗಣಿಸಬೇಕಾಗುತ್ತದೆ.

ಕ್ರಿಸ್ತನನ್ನು ನಮ್ಮ ಪಸ್ಕ ಎಂಬುದಾಗಿ ಪೌಲನು ತಿಳಿಸಿದ್ದಾನೆ (1 ಕೊರಿಂಥ 5:7). ಯೋಹಾನ 19:36ರಲ್ಲಿ, ಕ್ರಿಸ್ತನು ಮತ್ತು ಪಸ್ಕದ ಯಜ್ಞದ ಕುರಿ ಎಂಬ ಸಂಬಂಧವನ್ನು ನೋಡುತ್ತೇವೆ. ಅವನ ಮೂಳೆಗಳಲ್ಲಿ ಒಂದನ್ನೂ ಮುರಿಯಲಿಲ್ಲ ಎಂದು ಯೋಹಾನನು ತಿಳಿಸಿದ್ದಾನೆ. 1:18-21ರಲ್ಲಿ, ಪಸ್ಕದ ಕುರಿತಾಗಿ ಯಾವುದೇ ವಿಶ್ಲೇಷಣೆಯು ಇರುವದಿಲ್ಲ.

"ನಿಷ್ಕಳಂಕವಾದ, ಪೂರ್ಣಾಂಗವಾದ ಯಜ್ಞದ ಕುರಿ" ಎಂದು ಪೇತ್ರನು ತಿಳಿಸಿದ್ದಾನೆ. ಈ ವಾಕ್ಯವು ವಿಮೋಚನಕಾಂಡ 12ರಲ್ಲಿ ಕುರಿಮರಿಯನ್ನು ವಧಿಸುವ ವಿಷಯಕ್ಕೆ ನಮ್ಮನ್ನು ನಡಿಸುತ್ತದೆ. ಯಾವ ಯಾವ ಮನೆಯಲ್ಲಿ ಕುರಿಯ ರಕ್ತವನ್ನು ಪ್ರೋಕ್ಷಿಸ ಲಾಗಿತ್ತೋ, ಅಂಥಹ ಮನೆಗಳನ್ನು ದೇವರು ಹಾದು ಹೋದನು. ಕುರಿಮರಿಯ ರಕ್ತವು ಪಾಪಿಗಳನ್ನು ಬಂಧಮುಕ್ತರನ್ನಾಗಿ ಮಾಡಿತ್ತು, ಅವನನ್ನು ಪರಿಪೂರ್ಣನನ್ನಾಗಿ ಮಾಡಿತ್ತು, ನಾಶಮಾಡುವ ಸೈತಾನನಿಂದ ಅವನಿಗೆ ಬಿಡುಗಡೆಯನ್ನು ನೀಡಿತ್ತು.

ದೇವರ ಈ ಅಪರಿಮಿತವಾದ ಮತ್ತು ಕ್ರಿಸ್ತನ ಮೂಲಕ ಉಂಟಾಗುವ ಬಿಡುಗಡೆಯ ಯೋಜನೆಯನ್ನು ಜಗದುತ್ಪತ್ತಿಗೆ ಮೊದಲೆ ಯೋಜಿಸಲಾಗಿತ್ತು, ಮತ್ತು ಈ ಅಂತ್ಯಕಾಲದಲ್ಲಿ ನಿಮಗಾಗಿ ಪ್ರತ್ಯಕ್ಷವಾಯಿತು (1:20). ದೇವರ ಎಲ್ಲಾ ವಾಗ್ದಾನಗಳು ನೆರವೇರುವಂತೆ ಹಳೆ ಒಡಂಬಡಿಕೆಯ ಆತ್ಮವು ಉಸುರಿಸುತ್ತದೆ. ದಾವೀದನ ಅಂಕುರದವನು, ಸಿಂಹಾಸನದ ಮೇಲೆ ತಿರುಗಿ ಆಸೀನನಾಗುವನು ಮತ್ತು ದೇವರು ತನ್ನ ಜನರನ್ನು ಆಳುವನು. ಮನುಷ್ಯರ ಹೃದಯಗಳಲ್ಲಿ ಹೊಸ ಒಪ್ಪಂದವು ಬರೆಯಲ್ಪಡುತ್ತದೆ (ಯೆರೆಮಿಯಾ 31:33). ಚಿರತೆಯು ಮೇಕೆ ಮರಿಯೊಂದಿಗೆ ಮಲಗುವದು (ಯೆಶಾಯ 11:6). ದೇವರು ಮಾಡಿರುವ ಸಕಲ ವಾಗ್ದಾನಗಳು ಅವರ ಜೀವಿತದಲ್ಲಿ ನೆರವೇರುವದು ಎಂದು ಪೇತ್ರನು ತನ್ನ ಓದುಗರಿಗೆ ತಿಳಿಸುತ್ತಿದ್ದಾನೆ. ಅವರು ಎಲ್ಲದ್ದಕ್ಕೂ ಬಾಧ್ಯರು ಎಂದು ತಿಳಿಸಿದ್ದಾನೆ. ಕ್ರಿಸ್ತನ ಮೂಲಕವಾಗಿ ದೊರಕಿರುವ ವಿಶ್ವಾಸ ಮತ್ತು ನಿರೀಕ್ಷೆಯು ಸ್ವಾಭಾವಿಕವಾಗಿ ಅವರಲ್ಲಿ ಪರಿಶುದ್ಧತೆಯನ್ನು ಉಂಟುಮಾಡುತ್ತಿತ್ತು.

## ನಾಶವಾಗದ ಬೀಜದಿಂದ ಹುಟ್ಟಿದವರು (1:22-25)

1 ಪೇತ್ರ 3:21ರಲ್ಲಿ, "ದೀಕ್ಷಾಸ್ನಾನ" ಎಂಬ ಪದವು ಒಂದೇ ಸಾರಿ ನಮೂದಾಗಿದ್ದರೂ, ಬೈಬಲಿನ ಅಧ್ಯಾಯನವನ್ನು ಗಂಭೀರವಾಗಿ ಪರಿಗಣಿಸಿರುವ ವಿದ್ಯಾರ್ಥಿಗಳು, ದೀಕ್ಷಾಸ್ನಾನ ಎಂಬುದು 1 ಪೇತ್ರ ಪತ್ರಿಕೆಯ ಬಹು ಪ್ರಾಮುಖ್ಯವಾದ ಅಂಶ ಎಂದು ಪರಿಗಣಿಸುವರು. ಒಬ್ಬ ವ್ಯಕ್ತಿಯು ದೀಕ್ಷಾಸ್ನಾನದ ಮೂಲಕ ಪರಿವರ್ತನೆಯಾದ ಅಂಶವನ್ನು ಆದಿ ಸಭೆಯ ನಾಯಕರುಗಳು ಯಾವ ರೀತಿಯಲ್ಲಿ ಉಪಯೋಗಿಸುತ್ತಿದ್ದರೋ, ಅದೇ ರೀತಿಯಾಗಿ ಈ ಪತ್ರಿಕೆಯಲ್ಲಿ ಉಪಯೋಗಿಸಲಾಗಿದೆ ಎಂಬುದು ಕೆಲವರ ಅಭಿಪ್ರಾಯ. ಒಬ್ಬನು ದೀಕ್ಷಾಸ್ನಾನ ಹೊಂದುವದರ ಮೂಲಕ ಹೊಸಬನಾಗುತ್ತಾನೆ. ಈ ಕ್ರಿಯಾಪದವನ್ನು ಪೌಲನು ಉಪಯೋ ಗಿಸಿ, ದೀಕ್ಷಾಸ್ನಾನದ ಮುಖಾಂತರ "ನಾವೂ ಕೂಡ ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳಬೇಕು" (ರೋಮಾಪುರ 6:4) ಎಂದು ಹೇಳುವುದರ ಮೂಖಾಂತರ ಸಂಕೇತ ಭಾಷಾ ಪ್ರಯೋಗವನ್ನು ಒಂದು ಹೆಜ್ಜೆ ಮುಂದಾಗಿದನು. ನೀವು ಪುನರ್ಜನ್ಮ ಹೊಂದಿದವ ರಾಗಿದ್ದೀರಲ್ಲಾ ಆ ಜನ್ಮವು ನಾಶವಾಗುವ ಬೀಜದಿಂದ ಉಂಟಾದದ್ದಲ್ಲಾ ನಾಶವಾಗದ ಬೀಜ ದಿಂದಲೇ ಉಂಟಾದದ್ದು (1:3) ಎಂಬ ಪೇತ್ರನ ಹೇಳಿಕೆಯಲ್ಲಿ ಪೇತ್ರನು ಕ್ರೈಸ್ತರ ದೀಕ್ಷಾಸ್ನಾನದ ಕುರಿತಾಗಿಯೇ ಹೇಳುವವನಾಗಿದ್ದಾನೆ, ಇದರಲ್ಲಿ ಯಾವ ಸಂದೇಹವು ಇರುವದಿಲ್ಲ (1:23).

ಒಬ್ಬ ಕ್ರೈಸ್ತನು ತನ್ನ ಯೋಗ್ಯತೆಗನುಗುಣವಾಗಿ ರಕ್ಷಿಸಲ್ಪಡುವನು ಎಂಬ ಯಾವುದೇ ಕ್ರೈಸ್ತರ ಸಲಹೆಗಳನ್ನು ಪೇತ್ರನು ಇಲ್ಲಿ ಊರ್ಜಿತಗೊಳಿಸುತ್ತಿಲ್ಲ, "... ನೀವು ಸತ್ಯೋಪ ದೇಶಕ್ಕೆ ವಿಧೇಯರಾಗಿದ್ದು ನಿಮ್ಮ ಆತ್ಮಗಳನ್ನು ಪರಿಶುದ್ಧಮಾಡಿಕೊಂಡಿದ್ದರಿಂದ" (1:22). ಪುನರುತ್ಥಾನದ ನಂತರದ ಮೊದಲ ಪಂಚಾಶತ್ತಮ ದಿನದಂದು ಪೇತ್ರನು "ವಕ್ರ ಬುದ್ಧಿಯುಳ್ಳ ಈ ಸಂತತಿಯವರಿಂದ ತಪ್ಪಿಸಿಕೊಳ್ಳಿರಿ" ಎಂದು ಎಚ್ಚರಿಸಿದನು (ಅಪೊಸ್ತಲರಕೃತ್ಯಗಳು 2:40). ದೇವರು ಕೃಪೆಯ ಮೂಲಕ ಪಾಪಕ್ಷಮೆಯನ್ನು ಮತ್ತು ನಿತ್ಯಜೀವವನ್ನು ನೀಡಿ ದ್ದಾನೆ. ಕೇಳುಗರು ದೇವರ ಕೃಪೆಯ ಕಡೆಗೆ ಕೈಚಾಚಿ ಪಡೆದುಕೊಳ್ಳಬೇಕು ಎಂದು ಪೇತ್ರನು ರಾಜಿಮಾಡುತ್ತಿರುವದಿಲ್ಲ, ಆದರೆ ನಿಮ್ಮ ಆತ್ಮಗಳನ್ನು ಪರಿಶುದ್ಧಮಾಡಿಕೊಂಡಿದ್ದರಿಂದ ಅಂದರೆ

ಅವರು ನಿರೀಕ್ಷೆಯ ಮತ್ತು ಕೃಪೆಯ ಉಪದೇಶಗಳನ್ನು ನಂಬಿ, ದೇವರ ಅಪ್ಪಣೆಗಳನ್ನು ಪಾಲಿಸುವದರಿಂದ ದೊರಕುವದು ಎಂದು ತಿಳಿಸುವವನಾಗಿದ್ದಾನೆ.

ಪುನರ್ಜನ್ಮಕ್ಕೂ ಮತ್ತು ಪರಿಶುದ್ಧತೆಗೂ ಹೆಚ್ಚು ವ್ಯತ್ಯಾಸವಿರುವದಿಲ್ಲ, ಬೀಜವು ನಾಶವಾಗದೆ ಇರುವದರಿಂದ, ವಿಶ್ವಾಸಿಯು ಪರಿಶುದ್ಧನಾಗುತ್ತಾನೆ. ಪೇತ್ರನ ಪರಿಶುದ್ಧವಾಗಿರಬೇಕು ಎಂಬ ತಾತ್ಪರ್ಯವನ್ನು ಆಸ್ಯ ಸೀಮೆಯಲ್ಲಿ ಜೀವಿಸುತ್ತಿದ್ದ ಜನರು ಅರ್ಥೈಸಿಕೊಂಡರೋ? ಇದರಿಂದ ಉತ್ತೇಜನಗೊಂಡು ಆ ಕಾಲದ ಕೆಟ್ಟ ಪ್ರಪಂಚವನ್ನು ಎದರಿಸಿದರೋ? ನಾವುಗಳು ಮಾಡಲು ಸಾಧ್ಯವೋ? ಪಾಶ್ಚಿಮಾತ್ಯದ ಕಂಟ್ರಿ ಮತ್ತು ರಾಕ್ ಸಂಗೀತಗಳ ಪದವನ್ನು ಕೇಳಿಸಿಕೊಳ್ಳುವುದು ಜ್ಞಾನದ ಅನುಭವಕ್ಕೆ ವಿಹಿತವೇ ತಕ್ಷಣದ ಸಂತೃಪ್ತಿ ಎಂಬುದು ಈ ಗಳಿಗೆಯ ಕರೆಯಾಗಿದೆ. ನಾವು ಯಾವುದಕ್ಕೂ ಕಾಯಬಾರದು ಎಂದು ಹೇಳಲಾಗಿದೆ. ಪ್ರಸಿದ್ಧಿ ಹೊಂದಿದ ದೂರದರ್ಶನದ ಕಾರ್ಯಕ್ರಮಗಳು, ತಕ್ಷಣದ ಸಂತೃಪ್ತಿ ಎಂಬ ಕರೆಯನ್ನು ಪುನರುಚ್ಛರಿಸುತ್ತಾರೆ. ಲಕ್ಷಗಟ್ಟಲೆ ಜನರು ಉನ್ನತವಾದ ಕರೆಗೆ ಕಿವಿಗೊಡದೆ, ತಾತ್ಕಲಿಕವಾದ ಕರೆಗೆ ಕಿವಿಗೊಡುವವರಾಗಿದ್ದಾರೆ.

ಕ್ರೈಸ್ತರು ಇಂಥಾ ಒಂದು ಪ್ರಪಂಚದಲ್ಲಿ ಜೀವಿಸುವವರಾಗಿದ್ದಾರೆ - ಆ ಕ್ರೈಸ್ತರು ಪರಿಶುದ್ಧ ರಾಗಿ ಜೀವಿಸಬೇಕಿತ್ತು. ಪೇತ್ರನ ಓದುಗರಿಗೆ ಅವರ ಕ್ರೈಸ್ತ ಜೀವಿತದಲ್ಲಿದ್ದಂಥ ಪರಿಶುದ್ಧತೆಗೂ ಮತ್ತು ಅವರ ಹಳೆಯ ಜೀವಿತದಲ್ಲಿದ್ದ ನೀಚ ಸ್ವಭಾವಕ್ಕೂ ಇದ್ದ ವ್ಯತ್ಯಾಸವು ಮಂಕಾಗಿರಲಿಲ್ಲ, ಆದರೆ ನಮ್ಮ ಪ್ರಪಂಚ ವ್ಯತ್ಯಾಸವುಳ್ಳದ್ದಾಗಿದೆ. ಪರಿಶುದ್ಧವಾದ ಜೀವಿತಕ್ಕೂ ಮತ್ತು ಅಪರಿಶುದ್ಧ ವಾದ ಜೀವಿತಕ್ಕೂ ನಡುವೆ ಇರುವ ವ್ಯತ್ಯಾಸವು ಮಂಕಾಗಿರುತ್ತದೆ. ಅನೇಕ ಸಾರಿ ಕ್ರೈಸ್ತರು ಈ ವಿಷಯಕ್ಕೆ ಪ್ರಬೋಧಿ ಸುವವರಾಗಿರುತ್ತಾರೆ. ಲೋಕವು ನಮ್ಮನ್ನು ಕರೆಯವಾಗ, ಕೆಲವರು ಹೇಳುವದು, “ನಾವು ಈ ಲೋಕದ ಸಕಲ ಕಾರ್ಯಗಳಿಂದ ಪ್ರತ್ಯೇಕವಾಗಬಾರದು, ಇದು ನಮಗೆ ಸರಿ ಅನಿಸುತ್ತದೆಯೆ? ಈ ಪರಿಶುದ್ಧತೆಯ ಬಗ್ಗೆ ಬಹು ಯೋಚಿಸುವುದು ಅನಾಗತ್ಯ.” ಕೆಲವು ಕ್ರೈಸ್ತರು ಪ್ರಪಂಚವು ಅವರನ್ನು ಸಾರ್ಥಕನಾಮದಿಂದ: “ಧರ್ಮಾಂದರು” ಎಂದು ಕರೆಯಬಹುದು ಎಂದು ಭಯಪಡುವವರಾಗಿರುತ್ತಾರೆ. ಅವರು ರಾಜನ ಮಕ್ಕಳು ಎಂದು ಗಂಭೀರವಾಗಿ ಪರಿಗಣಿಸಿಕೊಂಡಿದ್ದಾರೆ ಎಂದು ಕೆಲವರು ತಿಳಿದುಕೊಳ್ಳುತ್ತಾರೆ.

ಈ ಲೋಕದ ವಿಷಯ ಲಂಪಟತ್ವದ ಕರೆಯು ಅನೇಕ ಕ್ರೈಸ್ತರನ್ನು ದುಃಖಪಡಿಸಿ ಅಧೈರ್ಯಪಡಿಸುತ್ತದೆ, ಯೆಹೋಶುವನು ಪುರಾತನ ಇಸ್ರಾಯೇಲ್ಯರಿಗೆ ನೀಡಿದ ಮಾತುಗಳು, ಈಗಿನ ನವೀನ ಸಭೆಗಳಿಗೆ ಅನ್ವಹಿಸುವಂಥದ್ದಾಗಿದೆ: “ನೀವು ಯೆಹೋವನನ್ನು ಸೇವಿ ಸಲಾರಿರಿ. ಆತನು ಪರಿಶುದ್ಧನು ತನಗೆ ಸಲ್ಲಬೇಕಾದ ಗೌರವವನ್ನು ಮತ್ತೊಬ್ಬನಿಗೆ ಸಲ್ಲಗೊಡಿಸದವನು ಆಗಿರುವ ದೇವರು; ...” (ಯೆಹೋಶುವ 24:19). ಪರಿಶುದ್ಧತ್ವವೆಂಬ ಸವಾಲಿಗೆ ನಾವು ಸಿದ್ಧವಿರುವೆವೋ? ಆ ಪ್ರಶ್ನೆಗೆ ಯಾವ ರೀತಿಯಾಗಿ ನಾವು ಉತ್ತರಿಸುತ್ತೇವೆ ಎಂಬುದು ನನಗೆ ತಿಳಿದಿರುವದಿಲ್ಲ. ಮೋಶೆಯು ಈ ರೀತಿಯಾಗಿ ಉತ್ತರಿಸಿದ್ದಾನೆ: “ನಾನು ಈಗ ನಿಮಗೆ ಬೋಧಿಸಿದ ಧರ್ಮೋಪದೇಶವು ನಿಮಗೆ ಗ್ರಹಿಸುವದಕ್ಕೆ ಕಷ್ಟವಾದದ್ದು ಅಲ್ಲ, ಹೊಂದುವಕ್ಕೆ ಅಸಾಧ್ಯವಾದದ್ದು ಅಲ್ಲ. ಈ ವಾಕ್ಯವು ನಿಮಗೆ ಸಮೀಪದಲ್ಲಿಯೇ ಇದೆ ಇದು ನಿಮ್ಮ ಬಾಯಲ್ಲಿಯೂ ಹೃದಯದಲ್ಲಿಯೂ ಇದೆ. ಇದನ್ನು ಅನುಸರಿಸುವದ್ಕೆ ಅವಕಾಶವುಂಟಷ್ಟೆ” (ಧರ್ಮೋಪದೇಶಕಾಂಡ 30:11, 14).

ಈ ಅಶುದ್ಧವಾದ ಪ್ರಪಂಚದಲ್ಲಿ ಪರಿಶುದ್ಧವಾದ ಜೀವಿತವನ್ನು ಜೀವಿಸಲು ಕಷ್ಟಪಡುತ್ತಿರುವ ಕ್ರೈಸ್ತರಿಗೆ ಪೇತ್ರನು ಎರಡು ಮೂಲಗಳನ್ನು ನೀಡಿದ್ದಾನೆ. ಮೊದಲನೆಯದಾಗಿ, ಪರಿಶುದ್ಧ ಪಟ್ಟಣಕ್ಕೆ ಪ್ರಯಾಣ ಮಾಡುತ್ತಿರುವ ಸಮೂಹದಲ್ಲಿ ಪರಸ್ಪರ ಪ್ರೀತಿಯನ್ನು ಕೊಡುವ ಮತ್ತು ತೆಗೆದುಕೊಳ್ಳುವ ಕಾರ್ಯವು ಪರಿಶುದ್ಧತೆಯ ಜೀವಿತಕ್ಕೆ ಬೆನ್ನೆಲುಬಾಗಿರುತ್ತದೆ. ನೀವು ಸತ್ಯೋಪ ದೇಶಕ್ಕೆ ವಿಧೇಯರಾಗಿದ್ದು ನಿಮ್ಮ ಆತ್ಮಗಳನ್ನು ಶುದ್ಧಮಾಡಿಕೊಂಡದ್ದರಿಂದ ನಿಷ್ಕಪಟವಾದ ಸಹೋದರ ಸ್ನೇಹವುಳ್ಳವರಾಗಿರತಕ್ಕದ್ದು, ಎಂದು ಹೇಳಿ ಹೀಗಿರಲಾಗಿ “ಒಬ್ಬರನ್ನೊಬ್ಬರು ಹೃದಯಪೂರ್ವಕವಾಗಿಯೂ ಯಥಾರ್ಥವಾಗಿಯೂ ಪ್ರೀತಿಸಿರಿ ಎಂದು ಪೇತ್ರನು ಉತ್ತೇಜಿ

ಸಿದನು" (1:22).

ಎರಡನೆಯದಾಗಿ, ಈ ಲೋಕದ ದುರಾಶೆಯು ತಾತ್ಕಾಲಿಕವಾಗಿದ್ದು, ಮತ್ತು ಪರಿಶುದ್ಧ ತೆಯು ನಿತ್ಯವಾಗಿದ್ದು ಗೌರವವುಳ್ಳದ್ದಾಗಿರುತ್ತದೆ, "ನೀವು ನಾಶವಾಗದ ಬೀಜದಿಂದ ಉಂಟಾದವರು," ಎಂದು ಪೇತ್ರನು ತಿಳಿಸಿದನು (1:23). ನಂತರ ಯೆಶಾಯ ಗ್ರಂಥದ ವಾಕ್ಯವನ್ನು ತಿಳಿಸಿದನು. ಯೆಶಾಯ 40:6-8, ಈ ವಾಕ್ಯ ಕೀರ್ತನೆ 103:15, 16ರಲ್ಲಿಯೂ ಪ್ರತಿಧ್ವನಿಸಿದೆ. "ಮನುಷ್ಯನ ಆಯುಷ್ಕಾಲವು ಹುಲ್ಲಿನಂತಿದೆ, ಅವನು ಅಡವಿಯ ಹುಲ್ಲಿನ ಹಾಗೆ ಶೋಭಿಸುತ್ತಾನೆ. ಹುಲ್ಲು ಒಣಗಿ ಹೋಗುವುದು, ಹೂವು ಉದುರಿ ಹೋಗುವುದು, ಕರ್ತನ ಮತೋ ಸದಾಕಾಲವು ಇರುವದು" (1:24, 25ಎ).

## ಮುಕ್ತಾಯ

1:13-25ರಲ್ಲಿ, ಪೇತ್ರನ ಓದುಗರು ಪರಿಶುದ್ಧರಾಗಿರಬೇಕೆಂದು ಎಚ್ಚರಿಸಿದನು ಮತ್ತು ಪರಿಶುದ್ಧತೆಗೆ ಮೂರು ಮಾರ್ಗಸೂಚಿಯನ್ನು ನೀಡಿದನು: ವಿಧೇಯತೇ, ಬಿಡುಗಡೆ ಮತ್ತು ಪುನರ್ಜನ್ಮ, ಪೇತ್ರನ ಓದುಗರ ಪ್ರಪಂಚವು ಕೆಲವು ವಿಷಯಗಳಲ್ಲಿ ಈಗಿನ ಪ್ರಪಂಚದಂತೆಯೇ ಇದ್ದು, ಇನ್ನೂ ಕೆಲವು ವಿಷಯಗಳಲ್ಲಿ ಬಹಳ ವ್ಯತ್ಯಾಸಗ ಳನ್ನು ಹೊಂದಿತ್ತು. ಮೊದಲ ಶತಮಾನದ ಅಂತ್ಯದಲ್ಲಿದ್ದ ಆಸ್ಯ ಸೀಮೆಯ ಕ್ರೈಸ್ತರು - ಮತ್ತು ಅಕ್ರೈಸ್ತರ ನಿಮಿತ್ತ ನಡುವೆ ದೊಡ್ಡ ವ್ಯತ್ಯಾಸಗಳಿದ್ದವು. "ಕ್ರೈಸ್ತರು ಕ್ರಿಸ್ತನೇ" ಒಡೆಯನು ಎಂದು ಹೇಳಿದ್ದರ ನಿಮಿತ್ತ ನಿಂದೆಗೆ ಒಳಗಾಗಿ ತಿರಸ್ಕರಿಸಲ್ಪಟ್ಟರು. ಅವರಿಗೆ ದೈಹೀಕವಾಗಿಯೂ, ಮಾನಸಿಕವಾ ಗಿಯೂ ಉಂಟಾಗುವ ಯಾತನೆಗೆ, ಪೇತ್ರನು ಯಾವ ವಿಧವಾದ ಉಪಶಮನವನ್ನಾಗಲೀ, ಪರಿಹಾರವನ್ನಾಗಲೀ ನೀಡಲಿಲ್ಲ, ಅದಕ್ಕೆ ತದ್ವಿರುದ್ಧವಾಗಿ ಹಿಂಸೆಯು ಇನ್ನೂ ಹೆಚ್ಚಾಗಬಹುದು ಎಂದು ಮುಂತಿಳಿಸಿದನು. ಏನೇ ಬಂದರೂ, ಅವರು ದೇವರ ಜನರು ಮತ್ತು ದೇವ ಜನರು ಪರಿಶುದ್ಧವಾದವರು ಎಂದು ತಿಳಿಸಿದನು.

ಈ ಇಪ್ಪತ್ತನೆ ಶತಮಾನದಲ್ಲಿ ಯಾರ್‍ಯಾರು ಕರ್ತನ ಹೆಸರನ್ನು ಹೊಂದಿದ್ದಾರೋ ಅವರಿಗೆ ಪರಿಶುದ್ಧತೆಗಿಂತಲೂ ಹೆಚ್ಚಿನ ಕೊರತೆಯು ಇರುವದಿಲ್ಲ, ಕಾರಣಕ್ಕೂ ಅಥವಾ ಹೊಂದಾಣಿಕೆಗೂ ಸ್ಥಳವಿರುವದಿಲ್ಲ. ಕೆಲವು ನವೀನ ಕ್ರೈಸ್ತರು (ಅಮೇರಿಕದಲ್ಲಿರುವವರು) ಕ್ರೈಸ್ತರಾಗಿರುವದರಿಂದ ದೈಹೀಕವಾದ ಕೆಲವು ನಿಂದೆಗಳಿಗೆ ಒಳಗಾಗಬಹುದು. ಈ ದಿನ ಪಾಪವು ನಮ್ಮನ್ನು ತನ್ನ ಒಡಲಿನಲ್ಲಿಟ್ಟು ಮುದ್ದಿಸುತ್ತದೆ ಮತ್ತು ನಾವು ಕೇವಲ ಮಾನವರು ಎಂದು ಹೇಳುತ್ತದೆ, ನಾವು ನಮ್ಮಿಂದ ಹೆಚ್ಚಾದದನ್ನು ಬಯಸಲು ಅಸಾಧ್ಯ ಎಂದು ಹೇಳುತ್ತದೆ.

ಕ್ರೈಸ್ತರಿಗೆ ಪರಸ್ಪರರ ಅವಶ್ಯವಿರುತ್ತದೆ. ಯಥಾರ್ಥವಾದ ಹೃದಯದಿಂದ ಒಬ್ಬರನ್ನೊಬ್ಬರು ಪ್ರೀತಿಸಬೇಕು. ಯಾಕೆಂದರೆ ಕ್ರಿಸ್ತನು ನಮ್ಮನ್ನು ಪರಿಶುದ್ಧವಾದ ಮನೆಯಲ್ಲಿ ಒಟ್ಟುಗೂಡಿಸಿರುವದರಿಂದ, ಪರಸ್ಪರ ಬಲವನ್ನು, ಪ್ರೋತ್ಸಾಹವನ್ನು ಹೊಂದಿಕೊಳ್ಳಲು ಅನುಕೂಲಕರವಾಗಿದೆ, ಆತನ ಮನೆಯು ಸದಾಕಾಲವಿರುತ್ತದೆ, ಅದು ಹುಲ್ಲಿನ ಪ್ರಭಾವದಂತೆ ಇದ್ದು, ಉದುರಿಹೋಗುವಂಥದ್ದಲ್ಲ. ಅಧ್ಯಾಯ 2ರಲ್ಲಿ, ಪೇತ್ರನು ಕೈಯಿಂದ ಕಟ್ಟಿದ ಕಟ್ಟಡದ ಕುರಿತು ಹೇಳದೆ, ಆತ್ಮೀಕ ಕಲ್ಲುಗಳಿಂದ ಕಟ್ಟಿದ ಕಟ್ಟಡದ ಕುರಿತು ತಿಳಿಸಿದ್ದಾನೆ. ವ್ಯರ್ಥ ವಾದ ನಡವಳಿಕೆಯನ್ನು ತ್ಯಜಿಸಿದ, ಮತ್ತು ಯಜ್ಞದ ಕುರಿಯಾದಾತಾನ ರಕ್ತದಿಂದ ಬಿಡುಗಡೆ ಹೊಂದಿರುವ ಸ್ತ್ರೀ/ಪುರುಷರಿಂದ ಉಂಟಾದ ಪರಿಶುದ್ಧವಾದ ಆಲಯದ ಕುರಿತು ಈಗ ಅರ್ಥಮಾಡಿಕೊಳ್ಳೋಣ.